doc-555
T-P-2

Reg No B G 155 5 — 10 —72

In The State **First Golden Jubilee Celebrated Paper 'Satyavadi' daily, Mysore 4**

**56 th Year of Publication**

★

News, Views, Dharmic Moral Ethical Matters

# ಸತ್ಯವಾದಿ

ರಾಷ್ಟ್ರದಲ್ಲಿ ಪ್ರಥಮ ಸುವರ್ಣ ಮಹೋತ್ಸವ ಪೂರೈಸಿದ ಪತ್ರಿಕೆ

ಸ್ಥಾಪಕರು: ಅರಮನೆ ಸರಸ್ತೇದಾರ್ ಎಂ.ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [ 2 ಪೈಸೆ

## ಆಹಾರ ಪದಾರ್ಥಗಳನು ಹತೋಟಿಗೊಳಿಸುವಂತೆ ಕೇಂದಕೆ ಕರೆ

### ಮದುವೆ ಹೆಣ್ಣಿಗೆ 72 ವರ್ಷ, ಗಂಡಿಗೆ 30 ವರ್ಷ

ಮಿರ್ಜಾ— 72 ವರ್ಷದ ಇನ್ನೂ ಅವಿವಾಹಿತೆಯಾಗಿರುವ ಖ್ಯಾತ ನಾಟಕ ಮತ್ತು ಚಲಚ್ಚಿತ್ರ ನಟಿ ತಾನು ಕ್ಷಿಪ್ರದಲ್ಲೇ ವಿವಾಹವಾಗುವುದಾಗಿ ತಿಳಿಸಿರುವಳು ; ಅವಳ ಪ್ರೇಮಿ 30 ವರ್ಷದ ಕವಿ ಮತ್ತು ನಟ ಬೋನೋ ವಿಲಾರ್ ; ಇವರಿಬ್ಬರೂ ಮದುವೆಯಿಲ್ಲದೆ ಜೊತೆಯಲ್ಲಿ ಬೇಕಾದ ಕಡೆ ಹೋಗುವದನ್ನು 102 ವರ್ಷದ ಅವಳ ತಾಯಿ ಒಪ್ಪಲಿಲ್ಲವಾಗಿ, ಮದುವೆಯಾಗು ತ್ತಾಳೆ — ವಧುವಿಗಿಂತ ವರನ ತಾಯಿ 22 ವರ್ಷ ಚಿಕ್ಕವಳಾಗಿದ್ದಾಳೆ — ತನ್ನ ವಿವಾಹವು ಪಾರಮಾರ್ಥಿಕವಾದುದೆಂದೂ ಲೈಂಗಿಕ ಮೂಲವಲ್ಲವೆಂದೂ ವರನ ಹೇಳಿಕೆಯಾಗಿದೆ.

★

### ಸಮಾಜವಾದ

ಮಧುರೈ— ಸಮಾಜವಾದವು, ಅದು ತಿಳಿಯಲಿ ತಿಳಿಯದಿರಲಿ, ಒಂದು ಮಂತ್ರವಾಗಿದೆಯೆಂದೂ, ಮತ್ತು ರಾಜಕಾರಣಿಗಳಿಗೆ ಒಂದು ತಂತ್ರವಾಗಿದೆಯೆಂದೂ ಗಾಂಧೀ ಜಯಂತಿಯಲ್ಲಿ ಪಾರ್ಲಿಮೆಂಟು ಸದಸ್ಯರೂ, ಹಳೇ ಕಾಂಗ್ರೆಸ್ ನಾಯಕರೂ ಆದ ಶ್ರೀ ಕಾಮರಾಜರು ಹೇಳಿದರು

★

### ಕೆನಡಿ ಕೊಲೆ

ಪ್ಯಾರಿಸ್— ಮಾಜಿ ಓಏಸ್ ಭಯೋತ್ಪಾತಕ ಜೋಸಿ ಲೂಯಿ ರೊಮೇರೊಗೆ 1961 ರ ಮೇ 31 ರಲ್ಲಿ ಪ್ಯಾರಿಸ್‌ನಲ್ಲಿ ಅಧ್ಯಕ್ಷ ಡಿಗಾಲರೊಡನೆ ತೆರೆದ ಕಾರಿನಲ್ಲಿ ಹೋಗುತ್ತಿದ್ದ ಅಮೇರಿಕಾ ಅಧ್ಯಕ್ಷ ಜಾನ್ ಕೆನಡಿಯನ್ನು ಕೊಲೆಮಾಡಲು ರೂ 29 2 ಲಕ್ಷ ಕೊಡಲು ಅಮೆರಿಕಾ ರಹಸ್ಯ ಏಜೆನ್ಸಿ ಒಂದಿದ್ದ ವಿಷಯ ಕೋರಡಿಸಲಾಗಿದೆ.

★

### ಮೆರವಣಿಗೆ ಇಲ್ಲ

ರಾಜ್ಯದಲ್ಲಿನ ಅಭಾವ ಪರಿಸ್ಥಿತಿಗಾಗಿ ಮಿತವ್ಯಯ ಅನುಸರಿಸಬೇಕಾಗಿದ್ದು, ದಸರಾದಲ್ಲಿಯ ಮೆರವಣಿಗೆ ಮತ್ತು ಟಾರ್ಚ್ ಲೈಟ್ ಪೆರೇಡು ವಜಾಮಾಡಲಾಗಿದೆ ಎಂದು ದಸರಾ ಸಮಾರಂಭ ಸಮಿತಿಯ ತುರ್ತು ವಿಾಟಿಂಗಿನ ನಂತರ ಅದರ ಅಧ್ಯಕ್ಷರಾದ ಶ್ರೀ ಅಜೀಜ್ ಸೇಟ್‌ರವರು ತಿಳಿಸಿದರು

★

### ವಸ್ತುಪ್ರದರ್ಶನ

ಮೈಸೂರು— ದಸರಾ ವಸ್ತುಪ್ರದರ್ಶನ ಮತ್ತು ಕೈಗಾರಿಕಾ ಸಂತೆಯನ್ನು ತಾ॥ 8 ಭಾನುವಾರ ಬೆಳಿಗ್ಗೆ 10 ಗಂಟೆಗೆ ಭಾರತ ಪ್ರವಾಸ ಮತ್ತು ವಿವಾನ ಸ್ಟೇಟ್ ಸಚಿವೆ ಡಾ॥ ಸರೋಜಿನಿ ಮಹಿಷಿಯರು ಉದ್ಘಾಟಿಸುವರು, ಮತ್ತು ಸಮಾರಂಭದ ಅಧ್ಯಕ್ಷತೆಯನ್ನು ರಾಜ್ಯದ ಕೈಗಾರಿಕಾ ಮಂತ್ರಿ ಶ್ರೀ ಎಸ್. ಎಂ. ಕೃಷ್ಣರು ವಹಿಸುವರು.

★

### ಮರಣದಂಡನೆ

ನವದೆಹಲಿ— ಅಲಹಾಬಾದು ಹೈಕೋರ್ಟು ಜಗಮೋಹನ್‌ಸಿಂಗಿಗೆ ವಿಧಿಸಿದ್ದ ಮರಣದಂಡನೆ ಬಗ್ಗೆ, ಆತನು ಇದು ರಾಜ್ಯಾಂಗ. ಮೂಲಭೂತ ಹಕ್ಕಿನ ಜೀವ ಮತ್ತು ಸ್ವಾತಂತ್ರ್ಯ ರಕ್ಷಣೆ ವಿರುದ್ಧವೆಂದೂ ಸುಪ್ರೀಂ ಕೋರ್ಟ್‌ನಲ್ಲಿ ಹಾಕಿದ್ದ ಅಪೀಲು ಡಿಸ್‌ಮಿಸ್ ಆಯಿತು

★

### ಕೇಂದ್ರದ ನೆರವು

ಬೆಂಗಳೂರು— ಅಭಾವ ಪರಿಹಾರ ಕಾಮುಗಾರಿಗಳಿಗಾಗಿ ಮತ್ತು ವ್ಯವಸಾಯ ಉತ್ಪತ್ತಿ ಹೆಚ್ಚಿಸಿಕೊಳ್ಳಲು ಕೈಗೊಳ್ಳುವ ಯೋಜನೆಗಾಗಿ ಕೇಂದ್ರ ಸರಕಾರ ರಾಜ್ಯಕ್ಕೆ ನೆರವು ನೀಡಲು ಒಪ್ಪಿರುವುದಾಗಿ ಅರ್ಥ ಮಂತ್ರಿ ಶ್ರೀ ಸೌರ್ಡೆ ಹೇಳಿದರು

### ಗಂಡನನ್ನು ಜೀವಸಹಿತ ಸುಡುವ ಪ್ರಯತ್ನ

ಮಡಕೇರಿ— ತನ್ನ ಗಂಡನು ಮಲಗಿದ್ದಾಗ ಅವನಿಗೆ ಬೆಂಕಿ ಹತ್ತಿಸಿದ ಒಬ್ಬ ಮಹಿಳೆಯನ್ನು ದಸ್ತಗಿರಿ ಮಾಡಲಾಗಿದೆ ; ತುಂಬಾ ಸುಟ್ಟ ಗಾಯಗಳಿಂದ ಕೂಡಿದ್ದ ಗಂಡನನ್ನು ಆಸ್ಪತ್ರೆಗೆ ಸೇರಿಸಲಾಯಿತು.

●

### ಮುಸ್ಲಿಂ ವಿದ್ಯಾರ್ಥಿ ಸಂಘ

ಚಾಮರಾಜನಗರದ ಮುಸ್ಲಿಂ ವಿದ್ಯಾರ್ಥಿ ಸಂಘವನ್ನು ಮೈಸೂರು ವಿಶ್ವವಿದ್ಯಾನಿಲಯದ ಡಾ॥ ಷೇಕ್ ಅಲಿ ಉದ್ಘಾಟಿಸಿದರು.

★

### "ವಿಜಯ" ರಜತೋತ್ಸವ

ಸಣ್ಣ ಪತ್ರಿಕೆಗಳಿಗೆ ಸರ್ಕಾರದ ಜಾಹೀರಾತು ಪ್ರೋತ್ಸಾಹ ಸಮಾಜವಾದ ದೃಷ್ಟಿಯಿಂದ ಅಗತ್ಯ— ಎಂದು ಶ್ರೀ ಕೆ. ಹನುಮಂತಯ್ಯನವರು ನಿನ್ನೆ ಸಂಜೆ ಮೈಸೂರಿನ ಪುರಭವನದಲ್ಲಿ 'ವಿಜಯ' ದೈನಿಕ ರಜತೋತ್ಸವದಲ್ಲಿ ಭಾಷಣಮಾಡುತ್ತಾ ತಿಳಿಸಿ ಪತ್ರಿಕೆಯ ರಜತೋತ್ಸವ ಸಾಧನೆಗಾಗಿ ಸಂಪಾದಕ ಶ್ರೀ ಎ ರಾಮಣ್ಣನವರನ್ನು ಅಭಿನಂದಿಸಿದರು.

ಮೈಸೂರು ಬಿಷಪ್ ರೆ॥ ಫರ್ನಾಂಡಿಸ್ ರವರು ಅಧ್ಯಕ್ಷ ಭಾಷಣ ಮಾಡುತ್ತಾ, ಪತ್ರಿಕೆ ರಜತೋತ್ಸವ ಮುಟ್ಟಿದ್ದಕ್ಕೆ ಶ್ರೀ ರಾಮಣ್ಣನವರನ್ನು ಅಭಿನಂದಿಸಿದರು

ಶ್ರೀ ಎ ರಾಮಣ್ಣನವರು ಸ್ವಾಗತ ಭಾಷಣ ಮಾಡಿದರು. ಶ್ರೀ ಬೋರೇಗೌಡರು ಸಂದೇಶ ಓದಿದರು ಶ್ರೀ ಬಾಲಯ್ಯನವರು ವಂದಿಸಿದರು

ಈ ಸಂದರ್ಭದಲ್ಲಿ, ಹಿಂಡೆ ನಡೆದಿರುವ "ಸತ್ಯವಾದಿ" ಸ್ವರ್ಣ ಮಹೋತ್ಸವವನ್ನೂ, "ಸಾಧ್ವಿ" ಮತ್ತು 'ವರ್ತಮಾನ' ರಜತ ಮಹೋತ್ಸವಗಳನ್ನೂ ಸ್ಮರಿಸಿಕೊಳ್ಳಬಹುದು.

### ಸರ್ಕಾರಕ್ಕೆ ಕಾಂ. ಕಾ. ಸಮಿತಿ ಸೂಚನೆ

ನವದೆಹಲಿ— ಆಹಾರ ಧಾನ್ಯಗಳ ಒಟ್ಟಾರೆ ವ್ಯಾಪಾರವನ್ನು ಸರ್ಕಾರ ವಹಿಸಿಕೊಳ್ಳಲೂ, ಸಕ್ಕರೆ, ಆಹಾರಕ್ಕೆ ಉಪಯೋಗಿಸುವ ಎಣ್ಣೆ, ಸ್ಟ್ಯಾಂಡರ್ಡ್ ಬಟ್ಟೆ, ಸೀಮೆ ಎಣ್ಣೆ ಮುಂತಾದ ಅವಶ್ಯ ಪದಾರ್ಥಗಳ ಮೇಲೆ ಸರಕಾರ ಹತೋಟಿ ಹೊಂದಿರುವಂತೆ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸರ್ಕಾರಕ್ಕೆ ಸೂಚನೆ ಇತ್ತಿದೆ.

★

### ಭೂಮಿ ಬದಲು ಹಸು

ಕೋಲಾರ— ಭೂ ಪರಿಮಿತಿ ಜಾರಿಗೆ ಬಂದ ನಂತರವೂ ಭೂಮಿ ಸಿಕ್ಕದ ಜನರಿಗೆ ಹಸುಗಳನ್ನು ಕೊಡಲಾಗುವುದೆಂದು ಪ್ರಾರಾಡಳಿತ ಮಂತ್ರಿ ಶ್ರೀ ಬಸವಲಿಂಗಪ್ಪನವರು ಹೇಳಿದರು.

★

### ದಸರಾಕ್ಕೆ ಹೆಚ್ಚು ಸಕ್ಕರೆ

ಮೈಸೂರು— ದಸರಾಹಬ್ಬಕ್ಕಾಗಿ ಕಾರ್ಡುದಾರರಿಗೆ ಕಾರ್ಡು ಒಂದಕ್ಕೆ ಒಂದು ಕೆಲೋ ಹೆಚ್ಚು ಸಕ್ಕರೆ ಕೊಡಲು ಆದೇಶಿಸಲಾಗಿದೆ.

●

### ಹರಿಜನ—ಗಿರಿಜನ ಉಪಹಾರಗೃಹ

ಮಂಗಳೂರು— ಗಾಂಧೀ ಜಯಂತಿಯಂದು ಜಿಲ್ಲೆಯಲ್ಲೇ ಪ್ರಥಮವು ಹರಿಜನ ಗಿರಿಜನರ ಆಡಳಿತೆಯ ಉಪಹಾರ ಗೃಹವನ್ನು ಸಹಕಾರ ಮಂತ್ರಿ ಶ್ರೀ ಶಂಕರ ಅಳ್ವರು ಉದ್ಘಾಟಿಸಿದರು.

★

### ಬೆಲೆ ಏರಿಕೆ ವಿರುದ್ಧ ಚಳವಳಿ

ಮೈಸೂರು— ಬೆಲೆ ಏರಿಕೆ ವಿರುದ್ಧ ಪ್ರತಿಭಟಿಸಿ ಬುಧವಾರ ಜಿಲ್ಲಾ ಕಚೇರಿ ಮುಂದೆ ಪಿಕೆಟಿಂಗು ನಡೆಸಿದಕ್ಕಾಗಿ ಸಿಪಿಐ ಪಾರ್ಟಿಯ 30 ಮಂದಿಯನ್ನು ದಸ್ತಗಿರಿ ಮಾಡಲಾಯಿತು.

### ಬಲಪ್ರಯೋಗ ವರ್ಜನೆ

ನ್ಯೂಯಾರ್ಕ್— ಪ್ರಪಂಚ ಸಂಸ್ಥೆ ಸದಸ್ಯರು ಅಂತರಾಷ್ಟ್ರೀಯ ಸಂಬಂಧಗಳಲ್ಲಿ ಬಲಪ್ರಯೋಗವನ್ನು ತ್ಯಜಿಸಬೇಕೆನ್ನುವ ಒಂದು ಕರಡು ಗೊತ್ತುವಳಿಯನ್ನು ಸೋವಿಯಟ್ ಒಕ್ಕೂಟದ ವಿಶೇಷಾಂಗ ಸಚಿವರಾದ ಶ್ರೀ ಗ್ರೋಮಿಕೊರವರು ಪ್ರಪಂಚ ಸಂಸ್ಥೆ ಸಕಲ ಸದಸ್ಯರ 27 ನೇ ಅಧಿವೇಶನದಲ್ಲಿ ಮಾತನಾಡುತ್ತಾ ಹೇಳಿದರು.

### ಮಳೆಯ ತೆರಿಗೆ

ಪಶ್ಚಿಮ ಜರ್ಮನಿಯ ನಾಗರೀಕರು ಹೊಸದೊಂದು ತೆರಿಗೆಯನ್ನು ನೀಡಬೇಕಾಗಿದೆ ; ಅದು ಮಳೆಯ ತೆರಿಗೆ ; ಲೂಸೆಂಬರ್ಗ್ ನಗರ ಮಂಡಲಿಯು ಇದನ್ನು ಮೊದಲು ವಿಧಿಸಿತು ; ಮಳೆ ನೀರನ್ನು ಸಾಗಿಸುವ ಹೊಸ ಚರಂಡಿ ವ್ಯವಸ್ಥೆಗೆ ನಾಗರೀಕರು ಹಣ ಕರಬೇಕೆಂದು ಅದು ನಿರ್ಧರಿಸಿದೆ ; ಇತರ ಜರ್ಮನ್ ನಗರಗಳೂ ಕೂಡ ಈಗ ಅದನ್ನು ಜಾರಿಗೆ ತರುವ ಯೋಜನೆಯಲ್ಲಿವೆ.

### ದಿವ್ಯವಾಣಿ

ಉಪವಾಸ ಮಾಡುವುದು, ತಪಸ್ಸು ಮಾಡುವುದು, ದೊಡ್ಡದು ; ಆದರೆ ತಪ್ಪನ್ನು ಕ್ಷಮಿಸುವುದು ಅವುಗಳಿಗಿಂತ ದೊಡ್ಡದು. — ತಿರುಕುರಾಲ್

ಮಿತವ್ಯಯವು ಎಷ್ಟು ದೊಡ್ಡ ಆದಾಯ ಎಂಬುದನ್ನು ಜನರು ತಿಳಿಯುವುದಿಲ್ಲ — ಸಿಸಿರೊ


## ವುಡ್‌ಲ್ಯಾಂಡ್ 6-10-72 ರಿಂದ ಅವೋಫ 2 ನೇ ವಾರ

ರಾಜೇಂದ್ರ ಕುಮಾರ್ ಅರ್ಪಿಸುವ ರೋಸ್ ಮೂವೀಸ್‌ರವರ
ಹಿಂದಿ ಕಲರ್ ಆತ್ಯವೋಫ ಚಿತ್ರ

## ಜವಾನಿ ದಿವಾನಿ

ಪಾತ್ರ : ರಣಧೀರ್ ಕಪೂರ್, ಜಯಭಾದುರಿ

ಸಂಗೀತ : ಆರ್. ಡಿ. ಬರ್ಮನ್

ದಿನ 3 ಪ್ರದರ್ಶನಗಳು

## ಅಪೆರಾ 6 10 72 ರಿಂದ

ಅವೋಫ ತೆಲುಗು ಚಿತ್ರ

## ಇನ್‌ಸ್ಪೆಕ್ಟರ್ ಭಾರ್ಯ

ಪಾತ್ರ : ಕೃಷ್ಣ, ಜ್ಯೋತಿಲಕ್ಷ್ಮಿ, ಚಂದ್ರಕಲ

ಪ್ರತಿ ದಿನ 3 ಪ್ರದರ್ಶನಗಳು

## ಗೋವಧೆ ನಿಶೇಧವಾಗಲಿ



Edited Printedand Published by Dharmapracharanirata
M S Krishna Rao ( Propretor ) at the Satvvad. Press
Chamarajapuram Mysore


## ಮೈಸೂರು ದಸರಾ ಉತ್ಸವಗಳು - 1972

ಇದೇ ಅಕ್ಟೋಬರ್ 8 ನೇ ತಾರೀಖಿನಿಂದ ಮೈಸೂರು ದಸರಾ ಉತ್ಸವಗಳ ಅಂಗವಾಗಿ ಹದಿನೈದು ದಿನಗಳ ಕಾಲ ಸಾಂಸ್ಕೃತಿಕ ಕಾರ್ಯಕ್ರಮಗಳನ್ನೂ ಹಾಗೂ ಒಂದು ವಾರ ನ್ಯಾಷನಲ್ ಫಿಲಂ ಆರ್ಚೀವ್ಸ್ ಆಫ್ ಇಂಡಿಯ ಅವರ ಸಹಯೋಗ ದೊಡನೆ ಚಿತ್ರೋತ್ಸವವನ್ನೂ ಮೈಸೂರುನಲ್ಲಿ ನಡೆಸಲಾಗುವುದು.

ಸುಪ್ರಸಿದ್ಧ ಚಲನಚಿತ್ರ ಕಲಾವಿದರು, ಹೆಸರಾಂತ ಸಂಗೀತಗಾರರು ಮತ್ತು ನೃತ್ಯಗಾರರು ಈ ಉತ್ಸವಗಳಲ್ಲಿ ಭಾಗವಹಿಸುವರು. "ಪಾಪ್" ಸಂಗೀತ ಕಾರ್ಯಕ್ರಮವು ಈ ವರ್ಷದ ವಿಶೇಷ ಹೆಚ್ಚಿನ ಆಕರ್ಷಣೆ.

ಸಾಂಸ್ಕೃತಿಕ ಕಾರ್ಯಕ್ರಮವು ಅಕ್ಟೋಬರ್ 8 ನೇ ತಾರೀಖು ಸಂಜೆ 6-30 ಗಂಟೆಗೆ ಕ್ರಾಫರ್ಡ್ ಹಾಲ್‌ನಲ್ಲಿ ಕುಮಾರಿ ಹೇಮಮಾಲಿನಿ ಅವರ ಭರತನಾಟ್ಯ ದೊಡನೆ ಆರಂಭವಾಗುವುದು.

ಈ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಟಿಕೆಟ್‌ಗಳು ಕ್ರಾಫರ್ಡ್ ಹಾಲ್, ಹೊಟೇಲ್ ಮೆಟ್ರೋಪೋಲ್, ದಾಸಪ್ರಕಾಶ್, ಇಂದ್ರ ಭವನ್ ಹಾಗೂ ಅಸಿಸ್ಟೆಂಟ್ ಡೈರೆಕ್ಟರ್, ವಾರ್ತಾ ಮತ್ತು ಪ್ರವಾಸೋದ್ಯಮ, ವಸ್ತುಪ್ರದರ್ಶನ ಕಟ್ಟಡ ಮೈಸೂರು ಇವರ ಕಛೇರಿಯಲ್ಲಿ ಮಾರಲ್ಪಡುವುವು.

## ಚಲನಚಿತ್ರೋತ್ಸವ

ಚಿತ್ರೋತ್ಸವವು ಮೃಣಾಲ್ ಸೇನ್‌ರವರ "ಏಕ್ ಅಧೂರಿ ಕಹಾನಿ" ಚಿತ್ರ ದೊಡನೆ ಮೈಸೂರು ಸಂಗಮ್ ಥಿಯೇಟರ್‌ನಲ್ಲಿ ಅಕ್ಟೋಬರ್ 8 ರಿಂದ ಆರಂಭವಾಗುವುದು.

ಹಿಂದಿ, ಕನ್ನಡ, ಬಂಗಾಳಿ, ಅಸ್ಸಾಮೀಸ್, ಮರಾಠಿ, ತಮಿಳು, ತೆಲುಗು, ಒರಿಯ, ಮಲೆಯಾಳಂ ಮತ್ತು ಗುಜರಾತಿಯ ಪ್ರಶಸ್ತಿ ವಿಜೇತ ಚಿತ್ರಗಳ ಜೊತೆಗೆ ರಷ್ಯ, ಅಮೆರಿಕ, ಯು ಕೆ., ಇಟಲಿ, ಸ್ವೀಡ್, ಬಲ್ಗೇರಿಯ, ಜೆಕೊಸ್ಲೊವಿಕಿಯ, ಫ್ರಾನ್ಸ್, ಜಿ. ಡಿ. ಆರ್. ಮತ್ತು ಜಪಾನಿನ ಸುಪ್ರಸಿದ್ಧ ಚಿತ್ರಗಳನ್ನು ಮೈಸೂರು ನಗರದ 7 ಚಿತ್ರಮಂದಿರಗಳಲ್ಲಿ ಸಂಗಮ್, ಪ್ರಭಾ, ಗಾಯತ್ರಿ, ಗಣೇಶ್, ಶಾಲಿಮಾರ್, ಚಾಮುಂಡೇಶ್ವರಿ ಮತ್ತು ರಣಜಿತ್‌ನಲ್ಲಿ ಪ್ರದರ್ಶಿಸಲಾಗುವುದು.

ಪ್ರತಿದಿನವೂ 4 ಪ್ರದರ್ಶನಗಳು. ಬೆಳಗ್ಗೆ 10-30, ಮಧ್ಯಾಹ್ನ 3-30, ಸಂಜೆ 6-30, ರಾತ್ರಿ 9-30 ಕ್ಕೆ. ಪ್ರವೇಶ ಟಿಕೆಟ್‌ಗಳು ರೂ. 1/- ಮತ್ತು ರೂ 2/-. ಆಯಾಯ ಥಿಯೇಟರುಗಳಲ್ಲಿ ದೊರೆಯುವುವು.

ಚಲನಚಿತ್ರ ಕೈಗಾರಿಕೆಯು ಆದು ಆರಂಭವಾದಾಗಿನಿಂದ ಸ್ಟಿಲ್ ಫೋಟೋಗ್ರಾಫ್‌ಗಳ ಒಂದು ಅಪೂರ್ವವಾದ ಪ್ರದರ್ಶನವು ಶ್ರೀ ರಂಗೂನ್‌ವಾಲಾರವರಿಂದಲೂ, ಕನ್ನಡ ಸ್ಟಿಲ್‌ಗಳು ಶ್ರೀ ನೆಟ್ಟಕಲ್ಲಪ್ಪನವರಿಂದಲೂ ವಸ್ತುಪ್ರದರ್ಶನದ ವಾರ್ತಾ ಮಳಿಗೆಯಲ್ಲಿ ಪ್ರದರ್ಶನಕ್ಕೆ ಏರ್ಪಡಿಸಲಾಗುವುದು.

ಇನ್ನೂ ಹೆಚ್ಚಿನ ವಿವರಗಳಿಗೆ ಎದುರುನೋಡಿ :

ಮೈಸೂರು ದಸರಾ ಸಾಂಸ್ಕೃತಿಕ ಮತ್ತು ಚಿತ್ರೋತ್ಸವದ ಉಪ ಸಮಿತಿ
ಅಧ್ಯಕ್ಷರಿಂದ ಪ್ರಕಟಿತ


Quality Printing Neat Binding

**Lakshminarasimha Press**

Sivarampet, Mysore


**Contribute Liberally to the National Defence Fund**